ಕರ್ನಾಟಕ ರಾಜ್ಯಕ್ಕೆ ಅಬಕಾರಿ ಇಲಾಖೆಯಿಂದ ಬರುವ ಆದಾಯ

೪೧೨ (೭೨೬) ಶ್ರೀ ಗೋಪಾಲ ಮುಕುಂದ ಕಾನಡೆ (ಪಿರ್ಸಿ). — ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ೧೯೮೬ ರಿಂದ ಈವರೆಗೆ ಅಬಕಾರಿ ಇಲಾಖೆಗೆ ಸರಾಯಿಯ ಕಂಟ್ರಾಕ್ಟರುಗಳಿಂದ ಬಂದ ಆದಾಯ ಎಷ್ಟು ? (ವರ್ಷವಾರು ವಿವರ ಒದಗಿಸುವುದು)

ಆ) ಮದ್ಯ ತಯಾರು ಮಾಡುವ ಡಿಸ್ಟಿಲರಿಗಳಿಂದ ಸರಕಾರಕ್ಕೆ ಬರುವ ಆದಾಯ ಎಷ್ಟು ? (ವರ್ಷವಾರು ವಿವರ ಒದಗಿಸುವುದು)

ಇ) ರಾಜ್ಯದಲ್ಲಿ ಲೈಸೆನ್ಸ್ ಪಡೆದ ಒಟ್ಟು ವೈನ್ ಅಂಗಡಿಗಳ (ಬ್ರಾಂದಿ) ಸಂಖ್ಯೆ ಎಷ್ಟು ?

ಶ್ರೀ ಎಸ್. ಆರ್ ಬೊಮ್ಮಾಯಿ (ಮುಖ್ಯಮಂತ್ರಿಗಳು). —

ಆರ್ಥಿಕ ವರ್ಷ

ಅ) ೧೯೮೬–೮೭ — ೧೧೫.೪೫ ಕೋಟಿ ರೂಪಾಯಿಗಳು
೧೯೮೭–೮೮ — ೧೩೬.೪೫ ಕೋಟಿ ರೂಪಾಯಿಗಳು.
೧೯೮೮–೮೯ — ೧೨೨.೪೨ ಕೋಟಿ ರೂಪಾಯಿಗಳು.
(ಫೆಬ್ರುವರಿ ೧೯೮೯ರವರೆಗೆ ತಾತ್ಕಾಲಿಕ)

ಆರ್ಥಿಕ ವರ್ಷ

ಆ) ೧೯೮೬–೮೭ — ೧೪.೮೧ ಕೋಟಿ ರೂಪಾಯಿಗಳು.
೧೯೮೭–೮೮ — ೧೪.೨೯ ಕೋಟಿ ರೂಪಾಯಿಗಳು.
೧೯೮೮–೮೯ — ೧೬.೧೦ ಕೋಟಿ ರೂಪಾಯಿಗಳು.
(ಫೆಬ್ರುವರಿ ೧೯೮೯ರವರೆಗೆ ತಾತ್ಕಾಲಿಕ)

ಇ) ೩೧೩೬.

ಕರ್ನಾಟಕದ ಪೋಲೀಸ್ ಇಲಾಖೆಯಲ್ಲಿರುವ ನೌಕರರ ಸಂಖ್ಯೆ

೪೧೩ (೭೩೨) ಶ್ರೀ ಕೋಪಾಲ ಮುಕುಂದ ಕಾನಡೆ, (ಪಿರ್ಸಿ). — ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕರ್ನಾಟಕದಲ್ಲಿ ಪೋಲೀಸ್ ಇಲಾಖೆಯಲ್ಲಿರುವ ನೌಕರರ ಸಂಖ್ಯೆ ಎಷ್ಟು ? (ಹುದ್ದೆವಾರು ಮಾಹಿತಿಯನ್ನೊದಗಿಸುವುದು)

ಆ) ಇವರಲ್ಲಿ ಹರಿಜನ–ಗಿರಿಜನರೆಷ್ಟು ? (ಹುದ್ದೆವಾರು ಮಾಹಿತಿಯನ್ನೊದಗಿಸುವುದು)

ಇ) ೧೯೮೬ ರಿಂದ ಇದುವರೆಗೆ ಈ ಇಲಾಖೆಗೆ ಎಷ್ಟು ಮಂದಿ ನೌಕರರನ್ನು ನೇಮಕ ಮಾಡಿಕೊಳ್ಳಲಾಗಿದೆ ? (ಹುದ್ದೆವಾರು ಮಾಹಿತಿಯನ್ನೊದಗಿಸುವುದು)

ಈ) ಈ ಇಲಾಖೆಯಲ್ಲಿ ಬಡ್ತಿ ಕೊಡದೇ ಇರುವುದು ನಿಜವೆ; ಹಾಗಿದ್ದಲ್ಲಿ ಕಾರಣವೇನು ?

ಶ್ರೀ ಎಸ್. ಆರ್, ಬೊಮ್ಮಾಯಿ (ಮುಖ್ಯಮಂತ್ರಿಗಳು). —

ಅ) ಹುದ್ದೆವಾರು ಮಾಹಿತಿಯನ್ನು ಲಗತ್ತಿಸಿದ ಅನುಬಂಧ (೧)ರಲ್ಲಿ ಕೊಡಲಾಗಿದೆ.

ಆ) ಹುದ್ದೆವಾರು ಮಾಹಿತಿಯನ್ನು ಲಗತ್ತಿಸಿದ ಅನುಬಂಧ (೨)ರಲ್ಲಿ ಕೊಡಲಾಗಿದೆ.

ಇ) ಇಲ್ಲ.

ಈ) ನಿಯಮಾವಳಿಗಳ ಪ್ರಕಾರ ಆಯಾಯ ಸಮಯಕ್ಕೆ ಸರಿಯಾಗಿ ಮುಂಬಡ್ತಿ ನೀಡಲಾಗಿದೆ.